ದಿನಾಂಕಃ 30-06-2018

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು **1, 3, 4** ಮತ್ತು **6** ನೇ ಪ್ರತಿವಾದಿ ಪರ ವಕೀಲರಿಂದಃ

ಹಾಲಪ್ಪ ಮತ್ತು ಬೀಮಪ್ಪ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿಯು ತುಪಪ್ಪನ ಎರಡನೇ ಹೆಂಡತಿ ಮಕ್ಕಳು ಎಂದು ಹೇಳುತ್ತಾರೆ. ಹಾಲಪ್ಪ ಎಂಬುವವರು ಈ ದಾವೆಯ ಪ್ರತಿವಾದಿಗಳ ವಿರುದ್ಧ ವಿಬಾಗಕ್ಕಾಗಿ 2011 ನೇ ಇಸವಿಯಲ್ಲಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಸಲು ದಾವೆ ಸಂ. 255/2011 ಆಗಿದ್ದು ಈಗ ನ್ಯಾಯಲಯದಲ್ಲಿ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ.ಈ ದಾವೆಯ ಸ್ವತ್ತುಗಳಿಗೆ ಸಂಬಂದಿಸಿ ಓ ಎಸ್ ನಂ. 255/2011 ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

ಹಾಲಪ್ಪ ನವರು ವಿಬಾಗಕ್ಕಾಗಿ ಓಎಸ್ ಸಂ. 307/2012 ರಂತೆ ಮತ್ತೊಂದು ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಾಲಪ್ಪ ಮತ್ತು ಬಿಮಪ್ಪ ನವರು 1975 ನೇ ಇಸವಿಯಲ್ಲಿ ಜುಬಾನಿ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಹೊಲಗಳನ್ನು ವಿಬಾಗ ಮಾಡಿಕೊಂಡಿರುತ್ತಾರೆ ಕಣ ಮತ್ತು ಮನೆಯನ್ನು ವಿಬಾಗ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ದಿಃ 1/10/2001 ರಂದು ಪ್ರತಿವಾದಿಗಳು ಮತ್ತು ಅವರ ಚಿಕ್ಕಪ್ಪ ನೊಂದಾಯಿತ ವಿಬಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಬಾಗ ಪತ್ರದ ಪ್ರಕಾರ ಕಣ ಮತ್ತು ಮನೆಗಳು ಹಾಲಪ್ಪನವರ ಬಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸದರಿ ವಿಬಾಗ ಪತ್ರದಲ್ಲಿ ನಾನು ಮತ್ತು ನನ್ನ ತಂದೆ ಪಕ್ಷಗಾರರಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಬಾಗ ಪತ್ರದ ಪ್ರಕಾರ ಹಾಲಪ್ಪ ಮತ್ತು ಪ್ರತಿವಾದಿಗಳು ಅವರ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ತುಪ್ಪಪ್ಪ ಬಿನ್ ಕೆಂಚಪ್ಪ ನವರು ನನ್ನ ಅಜ್ಜ ಎಂದರೆ ಸರಿಯಲ್ಲ.ಹಾಲಪ್ಪ ಮತ್ತು ಪ್ರತಿವಾದಿಗಳು ತುಪ್ಪಪ್ಪ ಬಿನ್ ತ್ಯಾರಂಗಪ್ಪ ನವರ ಮಕ್ಕಳು ಎಂದರೆ ಸಾಕ್ಷಿಯು ಹಾಲಪ್ಪ ನವರ ಎರಡನೇ ಹೆಂಡತಿ ಮಕ್ಕಳು ಎಂದು ಹೇಳುತ್ತಾರೆ. ತುಪ್ಪಪ್ಪ ಬಿನ್ ತ್ಯಾರಂಗಪ್ಪ ನವರ ಹೆಸರಿನಲ್ಲಿ ವಿಬಾಗ ಪತ್ರ ಆಗುವುದಕ್ಕೆ ಮೊದಲು ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ 1 ನೇ ಐಟಮ್ ಸ್ವತ್ತು

ಬೀಮಪ್ಪ ಬಿನ್ ತುಪ್ಪಪ್ಪ ನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳ ತಾಯಿ ಪುಟ್ಟಮ್ಮ ನವರ ತವರು ಮನೆ ಹೊದಿಗೆರೆ ಎಂದರೆ ನಿಜ. ಪುಟ್ಟಮ್ಮ ನವರ ತಂದೆಯ ಹೆಸರು ಸಿದ್ದಪ್ಪ ಎಂದರೆ ನನಗೆ ಗೊತ್ತಿಲ್ಲ. ಐಟಮ್ 2 ರ ದಾವಾ ಆಸ್ತಿಯನ್ನು ಪುಟ್ಟಮ್ಮ ನವರ ತವರು ಮನೆಯವರು ಪುಟ್ಟಮ್ಮ ನವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಗೆ ಪುಟ್ಟಮ್ಮ ನವರು ದಾನ ಪತ್ರ ಮಾಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಖಾತೆ ಸೃಷ್ಟಿ ಮಾಡಿ ದಾನ ಪತ್ರ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಿಃ 24/12/2007 ರಂದು ಸದರಿ ದಾನ ಪತ್ರ ನೊಂದಾವಣೆ ಆಗಿದೆ ಎಂದರೆ ಸರಿಯಲ್ಲ. ಸದರಿ ದಾನಪತ್ರದ ಪ್ರಕಾರ ಖಾತೆ ಮತ್ತು ಪಹಣಿ 1 ನೇ ಪ್ರತಿವಾದಿ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಕ್ರಯ ಪತ್ರದ ಮುಖಾಂತರ 1 ನೇ ಪ್ರತಿವಾದಿಯು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರದ ಪ್ರಕಾರ 6 ನೇ ಪ್ರತಿವಾದಿ ಹೆಸರಿಗೆ ಖಾತೆ ಮತ್ತು ಪಹಣಿ ಆಗಿದೆ ಎಂದರೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ